ಸಾಕ್ಷಿಯನ್ನು ದಿಃ **15.10.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ **2** ಮತ್ತು **3** ನೇ ಪ್ರತಿವಾದಿ ರವರ ಪರ ಶ್ರೀ ಸಿ.ಆರ್ ವಕೀಲರಿಂದಃ-</u>

ಚಿಕ್ಕಾಡನಹಳ್ಳಿ ಗ್ರಾಮ ಸಂಬಯ್ಯನ ಮಗ ಸ್ವಾಮಿ ಗೊತ್ತು. ಸ್ವಾಮಿಯ ಮಗ ಸೋಮ ಮತ್ತು ಅಳಿಯ ಲೊಕೇಶ ಗೊತ್ತು. 5 ನೇ ಪ್ರತಿವಾದಿ ನನ್ನ ಅಣ್ಣ, ಅವರ ಮಕ್ಕಳಾದ ದಿನೇಶ ಮತ್ತು ನಾರಾಯಣ ಗೊತ್ತು. 2 ನೇ ವಾದಿ ನನ್ನ ಅಣ್ಣ. ಲತಾ, ಶೇಖರ, ಸ್ವಾಮಿ, ಸೋಮಣ್ಣ ನನ್ನ ಗ್ರಾಮದವರು ಎಂದರೆ ಅಲ್ಲ. ಮೇಲೆ ಹೇಳಿದ ಸ್ವಾಮಿ, ಸೋಮ, ಲೊಕೇಶ, ಪುಟ್ಟಸ್ವಾಮಿ, ದಿನೇಶ, ನಾರಾಯಣ, ವೀರಭದ್ರ, ಲತಾ, ಶೇಖರ, ಸ್ವಾಮಿ ಮತ್ತು ಸೋಮಣ್ಣ ರವರು ದಿಃ 10.09.2020 ರಂದು 2 ಮತ್ತು 3 ನೇ ಪ್ರತಿವಾದಿಯವರು ಅಭಿವೃದ್ದಿ ಪಡಿಸಿದ ದಾವಾ ಸ್ವತ್ತಿನಲ್ಲಿ ಯು.ಜಿ.ಡಿ, ರಸ್ತೆ, ಒಳ ಚರಂಡಿ, ಉದ್ಯಾನವನ ಮತ್ತು ಡಾಂಬರ್ ಅನ್ನು ಹಾಳು ಮಾಡಿ 2 ಮತ್ತು 3 ನೇ ಪ್ರತಿವಾದಿಯವರೊಂದಿಗೆ ಗಲಾಟೆ ಮಾಡಿದ್ದಾರೆ

ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯಕ್ತಿಗಳೆಲ್ಲರೂ ನನ್ನ ಕುಮಕ್ಕಿನಿಂದಾಗಿ 2 ಮತ್ತು 3 ನೇ ಪ್ರತಿವಾದಿಯವರು ಅಭಿವೃದ್ಧಿ ಪಡಿಸಿದ ಬಡಾವಣೆಯನ್ನು ಹಾಳು ಮಾಡಿ 2 ಮತ್ತು 3 ನೇ ಪ್ರತಿವಾದಿಯರು ನೇಮಿಸಿದ್ದ ಮ್ಯಾನೇಜರ್ ಗೆ ಹಲ್ಲೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯಕ್ತಿಗಳ ವಿರುದ್ಧ ಪ್ರಧಾನ ಹಿರಿಯ ಶ್ರೇಣಿ ನ್ಯಾಯಾಲಯ ಹುಣಸೂರಿನಲ್ಲಿ ಸಿಸಿ ಸಂಖ್ಯೆ 1236/2021 ದಾಖಲಾಗಿದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯಕ್ತಿಗಳ ವಿರುದ್ಧ 2 ಮತ್ತು 3 ನೇ ಪ್ರತಿವಾದಿಗಳು ಹುಣಸೂರಿನ ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ ಓ.ಎಸ್ ನಂ. 207/2020 ಅನ್ನು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ವ್ಯಕ್ತಿಗಳಾಗಲಿ, ಅವರ ವಾರಸುದಾರರಾಗಲಿ ಹಾಗೂ ಅವರ ಪರ ಯಾರೆ ಆಗಲಿ 2 ಮತ್ತು 3 ನೇ ಪ್ರತಿವಾದಿಯರ ಸದರಿ ದಾವೆಯ ಷೆಡ್ಯೂಲ್ ನಲ್ಲಿ ಕಾಣಿಸಿದ ಆಸ್ತಿಗಳಿಗೆ ತೊಂದರೆ ಕೊಡಬಾರದೆಂದು ದಿಃ 07.11.2022 ರಂದು ನ್ಯಾಯಾಲಯವು ತಾತ್ಕಾಲಿಕ ತಡೆಯಾಜ್ಞೆ ನೀಡಿದೆ ಎಂದರೆ ಸರಿಯಲ್ಲ.

ಸರ್ವೆ ನಂ. 49/1 ಎ ಅಲ್ಲಿ 6 ಎಕರೆ ಮೂಲತಃ ಸಂಬಯ್ಯ ರವರಿಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನನ್ನು ಭೂ ಪರಿವರ್ತನೆ ಮಾಡಿಲು ಸಾಧ್ಯವಾಗುವುದಿಲ್ಲ ಎಂದು ತಿಳಿದು ಸಂಬಯ್ಯರವರು 6 ಎಕರೆಯನ್ನು 2 ಮತ್ತು 3 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಆ ರೀತಿ ಮಾರಾಟ ಮಾಡಿದ್ದರ ಬಗ್ಗೆ ಗೊತ್ತಿದ್ದರೂ ಕೂಡ ಸ್ವಾಮಿ, ಸೋಮ ಮತ್ತು ಲೊಕೇಶ ಭಾಗಾಂಶ ಕೇಳಿ ಇದೆ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 157/2015 ಅನ್ನು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡಿದೆ ಎಂದರೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಅಸಲು ದಾವೆ ಸಂಖ್ಯೆ 207/2020 ಅನ್ನು ದಾಖಲಿಸಿದ ನಂತರ ನನ್ನ ಮೂಲಕ ಈ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು, ನನ್ನ ಸಹೋದರರು, ಸಹೋದರರ ಮಕ್ಕಳು ಮತ್ತು ಸಂಬಯ್ಯನ ಮಕ್ಕಳು 2 ಮತ್ತು 3 ನೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪೂರ್ವಕ್ಕೆ ಯಾವ ಸರ್ವೆ ನಂ. ಬರುತ್ತದೆ ಎಂದರೆ ಹೇಳಲಾಗುವುದಿಲ್ಲ. ಪಶ್ಚಿಮಕ್ಕೆ ಯಾವ ಸರ್ವೆ ನಂ. ಬರುತ್ತದೆ ಎಂದರೆ ಮರೆತು ಹೋಗಿದ್ದೇನೆ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.